ಹುಬ್ಬಳ್ಳಿ ವಿದ್ಯುತ್ ಸರಬರಾಜು
ಕಂಪನಿ ನಿಯಮಿತ

[ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.]

ಕಂಪನಿ ಕಾರ್ಯಾಲಯ,
ನವನಗರ, ಹುಬ್ಬಳ್ಳಿ 580 025

Telephone No. : 0836-2223867
: 0836-2223865

HUBLI ELECTRICITY SUPPLY
COMPANY LIMITED

[Wholly owned Govt. of Karnataka undertaking]

Company Office,
Navanagar, Hubli-580 025.

Web Site : www.hescom.co.in
Email : gmadmhr.hescom@gmail.com

ಸಂಖ್ಯೆ: ಹುವಿಸಕಂನಿ/ಪ್ರವ್ಯ[ಆ]/ಲೆ[ಆ]/ಸಲೆ[ಆ]/ಹಿಸ[ಆ]/ವಿವ-01/ಕಾರಕ-755[14725]/2016-17/CYS-1329, ದಿನಾಂಕ: 15 ಜುಲೈ, 2016.

# ಸುತ್ತೋಲೆ

****

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ವ್ಯಾಪ್ತಿಯಲ್ಲಿ ಬರುವ ಹಲವಾರು ವಿಭಾಗ/ ವೃತ್ತಗಳನ್ನು ಹೊಸದಾಗಿ ರಚಿಸುವಾಗ ಹಾಲಿ ಇರುವ/ ಈ ಹಿಂದಿನ ವಿಭಾಗ/ ವೃತ್ತಗಳನ್ನು ವಿಭಜಿಸಿ ರಚಿಸಲಾಗಿರುತ್ತದೆ. ಸದರಿ ಪ್ರಕ್ರಿಯೆಯನ್ನು ಕಾರ್ಯಗತಗೊಳಿಸುವಾಗ ಈ ಹಿಂದಿನ ವಿಭಾಗ/ ವೃತ್ತದ ನೇಮಕಾತಿ ಪ್ರಾಧಿಕಾರದಡಿಯಲ್ಲಿ ಬರುವ ಸಿಬ್ಬಂದಿಗಳನ್ನು ಸಹ ವಿಭಾಗ/ ವೃತ್ತವಾರು ಪ್ರತ್ಯೇಕಿಸಿ, ಸಂಬಂಧಿಸಿದ ವೃಂದವಾರು ಹೊಸ ಜ್ಯೇಷ್ಠತಾ ಪಟ್ಟಿ ಪ್ರಕಟಿಸುವುದು ಅತಿ ಅವಶ್ಯಕವಾಗಿರುತ್ತದೆ. ಹೊಸದಾಗಿ, ವೃತ/ ವಿಭಾಗಗಳನ್ನು ವಿಭಜಿಸಿದಾಗ, ಮೇಲೆ ಕಾಣಿಸಿದ ಪ್ರಕ್ರಿಯೆಯನ್ನು ಸಕ್ರೀಯವಾಗಿ ನಿರ್ವಹಿಸದೇ ಇರುವ ಕುರಿತು, ಕಂಪನಿ ಕಾರ್ಯಾಲಯದ ಗಮನಕ್ಕೆ ಬಂದಿರುತ್ತದೆ. ಸದರಿ ಕಾರ್ಯವನ್ನು ಸಕಾಲದಲ್ಲಿ ಸಕ್ರೀಯೆಗೊಳಿಸದಿರುವುದನ್ನು ಕಂಪನಿ ಕಾರ್ಯಾಲಯವು ಗಂಭೀರವಾಗಿ ಪರಿಗಣಿಸುತ್ತದೆ. ಕಾರಣ, ಸದರಿ ಪ್ರಕ್ರಿಯೆಯನ್ನು ಕೈಗೊಳ್ಳಲು ಈ ಕೆಳ ಕಾಣಿಸಿದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಆದ್ಯತೆಯ ಮೇರೆಗೆ ನಿಯಮಾವಳಿಗಳನುಸಾರ ಸಕ್ರೀಯಗೊಳಿಸಲು ಸೂಚಿಸಿದೆ.

**i.** ವಿಭಜನೆ ನಂತರ ಆಯಾ ವೃತ್ತ/ ವಿಭಾಗದ ನೇಮಕಾತಿ ಪ್ರಾಧಿಕಾರದಡಿಯಲ್ಲಿ ಬರುವ ಎಲ್ಲಾ ಸಿಬ್ಬಂದಿಗಳ ಇಚ್ಛತಾ ಪತ್ರವನ್ನು ವಿಭಾಗ/ ವೃತ್ತವಾರು ಕಡ್ಡಾಯವಾಗಿ ಪಡೆದುಕೊಳ್ಳುವುದು.

**ii.** ಇಚ್ಛತಾ ಪತ್ರಗಳನ್ವಯ ವಿಭಜನೆ ಪ್ರಕ್ರಿಯೆಯನ್ನು ಸಕ್ರೀಯಗೊಳಿಸಿ, ವೃತ್ತ/ ವಿಭಾಗಗಳವಾರು ಆಯಾ ವೃಂದವಾರು ಜ್ಯೇಷ್ಠತೆಯನ್ನು ವಿಂಗಡನೆ ಮಾಡುವುದು.

**iii.** ಆಯಾ ವೃಂದವಾರು ವೃತ್ತ/ ವಿಭಾಗ ಪ್ರತ್ಯೇಕ ಸೇವಾ ಹಿರಿತನ ಪಟ್ಟಿಯನ್ನು ಪ್ರಕಟಿಸುವುದು.

**iv.** ಆಯಾ ವೃತ್ತ/ ವಿಭಾಗವಾರು ಪಡೆದ ಸಿಬ್ಬಂದಿಗಳ ಇಚ್ಚತಾವಾರು, ಆಯಾ ವೃತ್ತ/ ವಿಭಾಗವಾರು ಸೂಕ್ತ ಸ್ಥಳ ನಿಯೋಜನೆ ಮಾಡುವುದು. ಸದರಿ ಪ್ರಕ್ರಿಯೆ ಕೈಗೊಳ್ಳುವಾಗ ನಿಯಮಾವಳಿಗಳನ್ವಯ ಖಾಲಿ ಇರುವ ಹುದ್ದೆಗಳನ್ನು ಪರಿಗಣಿಸಿ, ಸೂಕ್ತ ಸ್ಥಳ ನಿಯುಕ್ತಿಯನ್ನು ಕೈಗೊಳ್ಳುವುದು.

[ಪು.ತಿ.ನೋ.]

**v.** ಮೇಲಿನ ಅಂಶ **[iv]** ರಲ್ಲಿಯ ಕ್ರಮಗಳನ್ನು ಕೈಗೊಳ್ಳುವುವಾಗ, ಆಯಾ ವಿಭಾಗ/ ವೃತ್ತಗಳಲ್ಲಿ ಯಾವುದೇ ಹುದ್ದೆಯ ಮೇಲಿನ ಹಕ್ಕಿನ ವ್ಯತ್ಯಾಸಗಳನ್ನು ಸಕ್ರಮಗೊಳಿಸಿ, ಹೊಂದಾಣಿಕೆಗಳನ್ನು ಆದಷ್ಟು ಕಡಿಮೆ ಮಾಡಲು ಕ್ರಮ ಕೈಗೊಳ್ಳುವುದು.

**ಟಿಪ್ಪಣಿ:** ಆಯಾ ವಲಯದ ಮುಖ್ಯ ಇಂಜಿನೀಯರ[ವಿ], ಮತ್ತು ನಿಯಂತ್ರಣಾಧಿಕಾರಿ ರವರಿಗೆ ಸದರಿ ಎಲ್ಲಾ ಕ್ರಮಗಳನ್ನು ನಿಯಮಾವಳಿಗಳನುಸಾರ ಕೈಗೊಂಡಿರುವ ಕುರಿತು ಮೇಲ್ವಿಚಾರಣೆ ಮಾಡಿ, ಆಯಾ ವಿಭಾಗ/ ವೃತ್ತವಾರು ಪ್ರತ್ಯೇಕ ವರದಿಗಳನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

ಪ್ರಧಾನ ವ್ಯವಸ್ಥಾಪಕರು
[ಆಡಳಿತ ಮತ್ತು ಮಾಸಂಅ]

ಪ್ರತಿ:

1. ನಿರ್ದೇಶಕರು[ತಾಂತ್ರಿಕ], ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.
2. ಮುಖ್ಯ ಆರ್ಥಿಕ ಅಧಿಕಾರಿ, ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.
3. ಮುಖ್ಯ ಇಂಜಿನೀಯರ್[ವಿ], ಹುಬ್ಬಳ್ಳಿ/ ಬೆಳಗಾವಿ ವಲಯ, ಹುವಿಸಕಂನಿ., ಹುಬ್ಬಳ್ಳಿ/ ಬೆಳಗಾವಿ.
4. ಮುಖ್ಯ ಇಂಜಿನೀಯರ[ವಿ], ಪ್ರಸರಣ ಮಾರ್ಗಗಳ ನಿರ್ವಹಣಾ ವಲಯ, ಕವಿಪ್ರನಿನಿ., ಬಾಗಲಕೋಟೆ.
5. ಅಧೀಕ್ಷಕ ಇಂಜಿನೀಯರ್[ವಿ][ಮಾಹಿತಿ ತಂತ್ರಜ್ಞಾನ], ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ - ಮಾಹಿತಿಗಾಗಿ ಮತ್ತು ಹುವಿಸಕಂನಿ ಅಂತರ್ ಜಾಲದಲ್ಲಿ ಪ್ರಕಟಿಸಲು ಸೂಕ್ತ ಕ್ರಮವನ್ನು ಕೈಗೊಳ್ಳಲು ಸೂಚಿಸಿದೆ.
6. ಅಧೀಕ್ಷಕ ಇಂಜಿನೀಯರ್[ವಿ], ಕಾರ್ಯ ಮತ್ತು ಪಾಲನೆ ವೃತ್ತ, ಹುವಿಸಕಂನಿ., ಹುಬ್ಬಳ್ಳಿ/ ಶಿರಸಿ/ ಹಾವೇರಿ/ ಬೆಳಗಾವಿ/ ವಿಜಯಪುರ/ ಬಾಗಲಕೋಟೆ/ ಚಿಕ್ಕೋಡಿ.
7. ಅಧೀಕ್ಷಕ ಇಂಜಿನೀಯರ್[ವಿ], ಪ್ರಸರಣ[ನಿರ್ವಹಣೆ] ವೃತ್ತ, ಕವಿಪ್ರನಿನಿ, ಹುಬ್ಬಳ್ಳಿ/ ಬೆಳಗಾವಿ/ ಬಾಗಲಕೋಟೆ.
8. ನಿಯಂತ್ರಣಾಧಿಕಾರಿಗಳು[ಆಂ.ಪ], ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.
9. ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ್[ವಿ], ಕಾರ್ಯ ಮತ್ತು ಪಾಲನೆ ವಿಭಾಗ, ಹುವಿಸಕಂನಿ.,
10. ಆಪ್ತ ಕಾರ್ಯದರ್ಶಿ[ವ್ಯ.ನಿ], ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ ಇವರ ಮಾಹಿತಿಗಾಗಿ ಮತ್ತು ಮಾನ್ಯರ ಅವಗಾಹನೆಗೆ ತರಲು ಕೋರಿದೆ.
11. ಮಹಾ ಕಡತ/ ಕಛೇರಿ ಪ್ರತಿ.